ಸಿ ಸಿ ನಂ. 1037 /2017

<u>ಸಾಕ್ಷಿಗೆ ದಿನಾಂಕ 25-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 5 P.W.: 2

ಹೆಸರು : ಶ್ರೀಧರ
ತಂದೆಯ ಹೆಸರು : ವೀರಣ್ಣ
ವಯಸ್ಸು : 34 ವರ್ಷ
ಉದ್ಯೋಗ : ಖಾಸಗೀ ಉದ್ಯೋಗಿ
ವಾಸ ಸ್ಥಳ : ಏಣಗಿ ಬಸಾಪುರ

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

1 ನೇ ಆರೋಪಿ ನನ್ನ ಚಿಕ್ಕಪ್ಪ, 2 ನೇ ಆರೋಪಿತಳು ನನ್ನ ಚಿಕ್ಕಮ್ಮ, 3 ಮತ್ತು 4 ನೇ ಆರೋಪಿತರು ನನ್ನ ತಮ್ಮಂದಿರು. ಚಾಸಾ-1 ನನ್ನ ತಾಯಿ, ಚಾಸಾ-4 ನನ್ನ ತಂದೆ, ಚಾಸಾ-6 ಮತ್ತು 7 ನನ್ನ ಸಹೋದರರು.

ದಿಃ 21-03-2017 ರಂದು ಸಂಜೆ 5.30 ರಿಂದ 6 ಗಂಟೆಯ ಸಮಯದಲ್ಲಿ ಜಮೀನನ್ನು ಕೊಡುವ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಜಗಳವಾಗಿದ್ದು ಸದರಿ ಜಗಳದಲ್ಲಿ ನನ್ನ ತಂದೆಯಾದ ಚಾಸಾ-4 ರವರಿಗೆ 1 ಮತ್ತು 2 ನೇ ಆರೋಪಿತರು ಸೂಳೇಮಗನಾ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿಯು ನನ್ನ ತಂದೆ ಚಾಸಾ-4 ರವರಿಗೆ ಕೊರಳಪಟ್ಟಿಯನ್ನು ಹಿಡಿದುಕೊಂಡು ಕೈಗೆ ಹೊಡೆದರು. 2 ನೇ ಆರೋಪಿತಳು ನನ್ನ ತಾಯಿ ಚಾಸಾ-1 ರವರಿಗೆ ಹೊಡೆದರು. ನನಗೆ 3 ನೇ ಆರೋಪಿತನು ನನ್ನ ಮರ್ಮಾಂಗಕ್ಕೆ ಕಟ್ಟಿಗೆಯಿಂದ ಹೊಡೆದನು. 1 ನೇ ಆರೋಪಿಯು ಚಾಸಾ-6 ನನ್ನ ಸಹೋದರನಿಗೆ ಇಟ್ಟಿಗೆಯಿಂದ ಮೈಕೈಗೆ ಹೊಡೆದನು. 4 ನೇ ಆರೋಪಿಯು ನನ್ನ ತಮ್ಮ ಚಾಸಾ-6 ರವರಿಗೆ ಇಟ್ಟಿಗೆಯಿಂದ ಹೊಡೆದರು. 2 ನೇ ಆರೋಪಿತಳು ನನ್ನ ತಾಯಿ ಚಾಸಾ-1 ನನ್ನ ತಾಯಿಯ ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ. ಮರುದಿನ ಈ ಬಗ್ಗೆ ನಾನು ಮತ್ತು ನನ್ನ ತಾಯಿ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇವೆ. ನಾನು ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದು

ಸದರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಸಮಕ್ಷಮದಲ್ಲಿರುವ ಮು ಮಾ-1 ಮತ್ತು 2 ನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ದಿಃ 20-03-2017 ರಂದು ಸಂಜೆ 6.15 ರ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಜಮೀನಿನ ವಿಚಾರವಾಗಿ ನಮ್ಮೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನನ್ನ ತಾಯಿಯಾದ ಚಾಸಾ-1 ರವರಿಗೆ 1 ನೇ ಆರೋಪಿತಳು ಕೈಯಿಂದ ಮೈಕೈಗೆ ಹೊಡೆದಿರುತ್ತಾರೆಂದರೆ ಸರಿ. ಜಗಳವನ್ನು ಬಿಡಿಸಲು ಹೋದ ನನಗೆ 3 ನೇ ಆರೋಪಿಯು ಕಟ್ಟಿಗೆಯಿಂದ ನನ್ನ ಎಡಪಕ್ಕೆ ಮತ್ತು ಬಲಭಾಗಕ್ಕೆ ಹಾಗೂ ಮರ್ಮಾಂಗಕ್ಕೆ ಹೊಡೆದಿರುತ್ತಾರೆಂದರೆ ಸರಿ. ನನ್ನ ಸಹೋದರ ಚಾಸಾ-6 ರವರಿಗೆ 4 ನೇ ಆರೋಪಿ ಇಟ್ಟಿಗೆಯಿಂದ ಎಡಪಕ್ಕೆಗೆ ಹೊಡೆದು ಗಾಯಪಡಿಸಿರುತ್ತಾರೆಂದರೆ ಸರಿ. ಸದರಿ ಆರೋಪಿತರು ನಮ್ಮನ್ನು ಜೀವಸಹಿತ ಬಿಡುವುದಿಲ್ಲವೆಂದು ಪ್ರಾಣಬೆದರಿಕೆಯನ್ನು ಹಾಕಿರುತ್ತಾರೆಂದರೆ ಸರಿ. ಗಾಯಗೊಂಡ ನನ್ನನ್ನು ಹಾಗೂ ನನ್ನ ಸಹೋದರ ಚಾಸಾ-6 ರವರನ್ನು ಚಾಸಾ-7 ರವರು ಮೋಟಾರು ಸೈಕಲ್ಲಿನಲ್ಲಿ ಹೆಚ್ ಬಿ ಹಳ್ಳಿ ಸರ್ಕಾರಿ ಆಸ್ಪತ್ರೆಗೆ ದಾಖಲುಪಡಿಸಿದ್ದು ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಸಿ ಜಿ ಆಸ್ಪತ್ರೆಗೆ ಹೋಗಿದ್ದೆವು ಎಂದರೆ ಸರಿ. ಸದರಿ ಜಗಳದಲ್ಲಿ ನನ್ನ ತಾಯಿಯಾದ ಚಾಸಾ-1 ರವರ ಮಾಂಗಲ್ಯ ಸರವು ಬಿದ್ದು ಹೋಗಿರುತ್ತದೆಂದರೆ ಸರಿ. ನಾನು ಈ ಬಗ್ಗೆ ನಿಪಿ-2 ರಂತೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿ.

<u>ಪಾಟೀ ಸವಾಲು. 1 ರಿಂದ 4 ನೇ ಆರೋಪಿತರ ಪರ ಶ್ರೀ ಪಿ ಆರ್ ವಕೀಲರಿಂದಃ-</u>

ನಮ್ಮ ಮತ್ತು ಆರೋಪಿತನ ನಡುವೆ ಆಸ್ತಿ ವಿಚಾರವಾಗಿ ವೈಮನಸ್ಸು ಇರುತ್ತದೆಂದರೆ ಸರಿ. ಹೊಲದ ಸಂಬಂಧ ಆರೋಪಿತರು ನನ್ನ ತಂದೆ ಚಾಸಾ-4 ರವರ ವಿರುದ್ಧ ಸಿವಿಲ್ ದಾವೆ

ದಾಖಲುಪಡಿಸಿರುತ್ತಾರೆಂದರೆ ಸರಿ. 2 ನೇ ಆರೋಪಿತಳು ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲುಪಡಿಸಿರುತ್ತಾರೆಂದರೆ ಸರಿ. ನನ್ನ ತಂದೆ ಹಾಗೂ ನನ್ನ ತಾಯಿ ದೂರನ್ನು ಕೊಡಲು ತಂಬ್ರಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದರು. ಸದರಿ ದಿನ ನಾನು ಅವರ ಜೊತೆ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ದಾವಣಗೆರೆಗೆ ಹೋಗಿದ್ದೆನು. ದಿಃ 22-03-2017 ರಂದು ದಾವಣಗೆರೆ ಆಸ್ಪತ್ರೆಗೆ ಹೋಗಿ ಅದೇ ದಿನ ವಾಪಾಸು ಬಂದಿರುತ್ತೇನೆ.

ಸದರಿ ದಿನ ಯಾರ್ಯಾರು ಹೇಗೆ ಬೈದಿರುತ್ತಾರೆಂದು ಹೇಳುವಿರಾ ಎಂದರೆ ಸಾಕ್ಷಿಯು ಆ ಸೂಳೆಮಗಾ ಈ ಸೂಳೆಮಗಾ ಜಮೀನು ಕೊಡುತ್ತಿಲ್ಲ ನಮ್ಮನ್ನು ಊರಿನಲ್ಲಿ ಇರಲು ಬಿಡದಂತೆ ಬೈದರು. 1 ರಿಂದ 4 ನೇ ಆರೋಪಿತರು ನಮಗೆ ಜೀವಬೆದರಿಕೆಯನ್ನು ಹಾಕಿರುತ್ತಾರೆ. ಬೇರೆ ಬೇರೆ ಕೋಲಿನಿಂದ 3 ಮತ್ತು 4 ನೇ ಆರೋಪಿತರು ನನಗೆ ಮತ್ತು ನನ್ನ ಸಹೋದರನಿಗೆ ಹೊಡೆದರು. 3 ಮತ್ತು 4 ನೇ ಆರೋಪಿತರ ಕೈಯಲ್ಲಿ ಬೇರೆ ಬೇರೆ ಕೋಲುಗಳಿದ್ದವು. ನ್ಯಾಯಾಲಯದಲ್ಲಿ ಒಂದು ಕೋಲು ಮಾತ್ರ ಇರುತ್ತದೆಂದರೆ ಸರಿ

3 ನೇ ಆರೋಪಿಯು ನನಗೆ ಕೋಲಿನಿಂದ ಮರ್ಮಾಂಗಕ್ಕೆ ಹೊಡೆದನು. ಈ ಬಗ್ಗೆ ನಾನು ದಾವಣಗೆರೆಯ ಸಿ ಜಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ನನ್ನ ತಾಯಿಯ ಚೈನು ಎಷ್ಟು ಗ್ರಾಂ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಗಾಯಗೊಂಡ ನಮ್ಮನ್ನು ಚಾಸಾ-7 ರವರು ಮೊದಲು ಹೆಚ್ ಬಿ ಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಸಿ ಜಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮು ಮಾ-1 ಮತ್ತು 2 ರಂತಹ ಮುದ್ದೆಮಾಲುಗಳು ಹೊರಗಡೆ ಸಾಕಷುಟ ಸಿಗುತ್ತವೆಂದರೆ ಸರಿ.

ಬೈಕಿನಲ್ಲಿ ನಾನು, ಚಾಸಾ-6 ಮತ್ತು ಚಾಸಾ-7 ರವರು ಬಂದೆವು. ನಾನು ಈ ಬಗ್ಗೆ ಘಟನೆ ನಡೆದ 2 ದಿನಗಳ ನಂತರ ಪೋಲೀಸರಿಗೆ ನಮ್ಮ ಊರಿನಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಸಮಯ ಹೇಳಲು ನೆನಪಿರುವುದಿಲ್ಲ.

1 ರಿಂದ 4 ನೇ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಜೀವಬೆದರಿಕೆಯನ್ನು ಹಾಕಿರುವುದಿಲ್ಲವೆಂದರೆ ಸರಿಯಲ್ಲ. ಕಟ್ಟಿಗೆ ಮತ್ತು ಇಟ್ಟಿಗೆಯಿಂದ ಹಲ್ಲೆ ಮಾಡಿಲ್ಲವೆಂದರೆ ಸರಿಯಲ್ಲ. ನಾವೇ ದಿಃ 20-03-2017 ರಂದು ಸಂಜೆ 5 ಗಂಟೆ ಸಮಯದಲ್ಲಿ ಅಕ್ರಮವಾಗಿ ಗುಂಪುಕಟ್ಟಿಕೊಂಡು 1 ರಿಂದ 4 ನೇ ಆರೋಪಿತರ ಮೇಲೆ ಹಲ್ಲೆ ಮಾಡಿದ್ದು ಅವಾಚ್ಯ ಶಬದಗಳಿಂದ ಬೈದಿರುತ್ತೇವೆಂದರೆ ಸರಿಯಲ್ಲ. ಸದರಿ ಜಗಳದಲ್ಲಿ ನಾನು 3 ನೇ ಆರೋಪಿತನ ಕೈಗೆ ಹೊಡೆದು ಗಾಯಪಡಿಸಿರುತ್ತೇನೆಂದರೆ ಸರಿಯಲ್ಲ. ಸದರಿ ದಿನ 2 ನೇ ಆರೋಪಿತಳು ರಾತ್ರಿ ೯ ರ ಸಮಯದಲ್ಲಿ ನಮ್ಮೆಲ್ಲರ ವಿರುದ್ದ ದೂರು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ದೂರು ನಮ್ಮ ವಿರುದ್ಧ ಬರುತ್ತದೆಂದು ನಾವು 1 ರಿಂದ 4 ನೇ ಆರೋಪಿತರ ವಿರುದ್ಧ ಮರುದಿನ ಸುಳ್ಳು ದೂರನ್ನು ಕೊಟ್ಟಿರುತ್ತೇವೆಂದರೆ ಸರಿಯಲ್ಲ. ಹೊಲವನ್ನು ಕಬಳಿಸುವ ಉದ್ದೇಶದಿಂದ 1 ರಿಂದ 4 ನೇ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ